**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** ಶ್ರೀ ಮಹಲಿಂಗಪ್ಪ ಹಣಮಂತಪ್ಪ ಸಿದ್ರಾಯಿ, ಸಹಾಯಕ ಇಂಜಿನಿಯರ್, ಕೆ.ಎನ್.ಎನ್.ಎಲ್. ಉಪವಿಭಾಗ-13, ಕೌಜಲಗಿ, ಗೋಕಾಕ್ ತಾಲ್ಲೂಕು ಬೆಳಗಾವಿ ಜಿಲ್ಲೆ. ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಮಾನ್ಯ ಲೋಕಾಯುಕ್ತರವರಿಗೆ ವಹಿಸುವ ಕುರಿತು.

**ಓದಲಾಗಿದೆ:**
1. ಮಾನ್ಯ ಉಪಲೋಕಾಯುಕ್ತರು, ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರಡಿ ಸಲ್ಲಿಸಿರುವ ವರದಿಸಂಖ್ಯೆ:ಕಂಪ್ಲೇಂಟ್/ ಉಪಲೋಕ್/ಬಿಜಿಎಂ/5570/2013/ಪಿಪಿ, ದಿನಾಂಕ:02.09.2016
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರ ಅ.ಸ.ಪತ್ರ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಜಿಎಂ/5570/2013/ಪಿಪಿ, ದಿನಾಂಕ: 15.09.2016.
3. ಸರ್ಕಾರದ 25.10.2016ರ ಸಮಸಂಖ್ಯೆಯ ಸರ್ಕಾರಿ ಆದೇಶ.

****

**ಪ್ರಸ್ತಾವನೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರು ಮೇಲೆ ಓದಲಾದ(2)ರಲ್ಲಿ ಓದಲಾದ ಪತ್ರದೊಂದಿಗೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರವರು ಮೇಲೆ(1) ರಲ್ಲಿ ಓದಲಾದಂತೆ ನೀಡಿರುವ ವರದಿ ಹಾಗೂ ಇತರ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸಿ, ಸದರಿ ವರದಿಯಲ್ಲಿನ ಶಿಫಾರಸ್ಸಿನಂತೆ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ತಿಳಿಸುವಂತೆ ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರವರ ವರದಿ ಹಾಗೂ ಇತರೆ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿದೆ. ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲ್ಲೂಕು ಪಂಚಾಯತ್ ವ್ಯಾಪ್ತಿಯ ಮಮದಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಬರುವ ಅಜ್ಜನಕಟ್ಟಿ, ಮರಡಿ ಶಿವಾಪುರ ಮತ್ತು ಮದಾಪುರ ಗ್ರಾಮದಲ್ಲಿ ಆಂತರಿಕ ನೀರು ಸರಬರಾಜು ಕಾಮಗಾರಿಗಳ ಪೈಪ್‌ಲೈನ್‌ಗಳು, ಗ್ರಾಮ ಪಂಚಾಯತಿ ವತಿಯಿಂದ 7 ರಿಂದ 15 ವರ್ಷಗಳ ಹಿಂದೆ ಹಾಕಿದ್ದ ಪೈಪಲೈನ್‌ಗಳಾಗಿದ್ದು, ಸದರಿ ಪೈಪ್‌ಲೈನ್‌ಗಳನ್ನೇ ಹೊಸದಾಗಿ ಪೈಪ್‌ಲೈನ್‌ಗಳನ್ನು ಹಾಕಿರುವುದಾಗಿ ತೋರಿಸಿ, ಬಿಲ್ಲುಗಳನ್ನು ಮಾಡಿ ಹಣವನ್ನು ದುರಪಯೋಗಪಡಿಸಿಕೊಂಡಿರುತ್ತಾರೆಂದು ಆರೋಪಿಸಿ, ಗೋಕಾಕ್ ತಾಲ್ಲೂಕಿನ ಅಜ್ಜನಕಟ್ಟಿ ನಿವಾಸಿಯಾದ ಶ್ರೀ ಜಯಗೌಡ ಸಿದ್ದಗೌಡ ಪಾಟೀಲ್, ಇವರು ಈ ಕೆಳಕಂಡ ಅಧಿಕಾರಿ/ನೌಕರರರ ವಿರುದ್ಧ ನೀಡಿದ್ದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 9 ರಡಿ ತನಿಖೆಗೆ ಕೈಗೆತ್ತಿಕೊಳ್ಳಲಾಗಿದ್ದು, ದೂರಿನ ಬಗ್ಗೆ ಎದುರುದಾರರ ಆಕ್ಷೇಪಣೆಗಳನ್ನು ಪಡೆಯಲಾಗಿ, ದೂರಿನಲ್ಲಿನ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಪ್ರತ್ಯುತ್ತರದ ಬಗ್ಗೆ ದೂರುದಾರರ ಹೇಳಿಕೆಯನ್ನು ಕೋರಲಾಗಿ,

ಉತ್ತರವನ್ನು ನೀಡಿರುವುದಿಲ್ಲವೆಂದು, ಮಾನ್ಯ ಉಪಲೋಕಾಯುಕ್ತರ ವರದಿಯಲ್ಲಿ ನಮೂದಿಸಲಾಗಿರುತ್ತದೆ.

| ಕ್ರ.ಸಂ | ಅಧಿಕಾರಿ/ನೌಕರರ ಹೆಸರು ಮತ್ತು ಪದನಾಮ | ಎದುರುದಾರರ ಸಂಖ್ಯೆ: |
|---|---|---|
| 1. | ಶ್ರೀ ಮಹಾಲಿಂಗಪ್ಪ ಹಣಮಂತಪ್ಪ ಸಿದ್ರಾಯಿ, ಸಹಾಯಕ ಅಭಿಯಂತರರು, ಕೆ.ಎನ್.ಎನ್.ಎಲ್. ಉಪವಿಭಾಗ-13, ಕೌಜಲಗಿ, ಗೋಕಾಕ್ ತಾಲ್ಲೂಕು ಬೆಳಗಾವಿ ಜಿಲ್ಲೆ. | 1 |
| 2. | ಕೆ.ಎಸ್.ಪಾಟೀಲ್, ಕಾರ್ಯನಿರ್ವಾಹಕ ಅಭಿಯಂತರರು, ತಾಲ್ಲೂಕು ಪಂಚಾಯತ್ ರಾಮದುರ್ಗ | 2 |
| 3. | ಶ್ರೀಮತಿ ಜಯಶ್ರೀ ಚಂದ್ರಶೇಖರ್ ಕೊನ್ನೂರ್, ಗ್ರಾಮ ಪಂಚಾಯತ ಸದಸ್ಯರು ಗ್ರಾಮ ಪಂಚಾಯತ ಮಮದಾಪುರ, ಗೋಕಾಕ್ ತಾಲ್ಲೂಕು. | 3 |
| 4. | ಶ್ರೀ ಸಿದ್ರಾಮ ಅಜ್ಜಪ್ಪ ಲಂಗೋಟಿ, ಹಿಂದಿನ ಚೇರ್ಮನ್, ಗ್ರಾಮ ಪಂಚಾಯತ, ಮಮದಾಪುರ, ಗೋಕಾಕ್ ತಾಲ್ಲೂಕು. | 4 |
| 5. | ಎಸ್.ಆರ್. ಜಮಖಂಡಿ, ಕಾರ್ಯದರ್ಶಿ, ಮಕ್ಕಲಗೇರಿ ಗ್ರಾಮ ಪಂಚಾಯತಿ | 5 |

ದೂರುದಾರರಾದ ಶ್ರೀ ಜಯಗೌಡ ಸಿದ್ದಗೌಡ ಪಾಟೀಲ್, ಇವರು ನೀಡಿದ್ದ ದೂರಿನ ಬಗ್ಗೆ ಲೋಕಾಯುಕ್ತ ಸಂಸ್ಥೆಯ ತಾಂತ್ರಿಕ ಕೋಶದ ಸಹಾಯಕ ಕಾರ್ಯಪಾಲಕ ಅಭಿಯಂತರರಿಂದ ತನಿಖೆಯನ್ನು ನಡೆಸಿ ಪಡೆಯಲಾದ ವರದಿಯಲ್ಲಿ ಈ ಕೆಳಕಂಡ ಅಂಶ ಕಂಡು ಬಂದಿರುತ್ತದೆ ಎಂದು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನಲ್ಲಿ ವರದಿ ಮಾಡಲಾಗಿರುತ್ತದೆ.

"ಎದುರುದಾರರಗಳು ಕರ್ತವ್ಯಲೋಪ ಎಸಗಿರುವುದು ಹಾಗೂ ಸದರಿ ಕಾಮಗಾರಿಗಳಿಂದ ಒಟ್ಟಾರೆ ರೂ. 15,21,402,-00 ಗಳ ಮೊತ್ತವನ್ನು ಹೆಚ್ಚುವರಿಯಾಗಿ ಪಾವತಿಸಿರುವುದು ಸ್ಪಷ್ಟವಾಗಿರುತ್ತದೆ ಎಂದು ಹಾಗೂ ಪ್ರತಿಯೊಬ್ಬ ಎದುರುದಾರರು ರೂ. 2,53,567/-ಗಳ ಮೊತ್ತಕ್ಕೆ ಜವಾಬ್ದರರಾಗಿರುತ್ತಾರೆಂದು ಹಾಗೂ ಮಮದಾಪುರದ ನೀರು ಸರಬರಾಜು ಯೋಜನೆಯಡಿಯಲ್ಲಿ ಅಜ್ಜರಗಟ್ಟಿ ಗ್ರಾಮದಲ್ಲಿ ಮರಡಿ ಶಿವಾಪುರ

ಗ್ರಾಮದಲ್ಲಿ ಹಾಗೂ ಮಮದಾಪುರ ಗ್ರಾಮದಲ್ಲಿ ಜೆ.ಎಲ್.ಎಸ್..ಆರ್.ಗಳನ್ನು ನಿರ್ಮಿಸಿ ನೀರು ಸರಬರಾಜು ಪೈಪ್‌ಗಳನ್ನು ಅಳವಡಿಸಿ, ನೀರು ಸರಬರಾಜು ಕಾರ್ಯಕ್ರಮಗಳನ್ನು ಕೈಗೊಂಡಿದ್ದು, ದೂರುದಾರರು ತಿಳಿಸಿರುವಂತೆ 7 ವರ್ಷದಿಂದ 15 ವರ್ಷಗಳ ಹಳೇ ಪೈಪಗಳನ್ನೇ ತೋರಿಸಿ ಹೊಸ ಪೈಪ್‌ಗಳನ್ನು ಅಳವಡಿಸಲಾಗಿದೆ ಎಂದು ಬಿಲ್ಲುಗಳನ್ನು ಮಾಡಿ ಹಣ ಬಿಡುಗಡೆ ಮಾಡಲಾಗಿದೆ ಎಂಬ ಆಪಾದನೆ ಸಾಬೀತಾಗಿಲ್ಲವೆಂದು, ಆದರೆ, ನೀರು ಸರಬರಾಜು ಸಂಪರ್ಕದ ಪೈಪಲೈನ್‌ಗಳನ್ನು ಅಳವಡಿಸುವಾಗ ನಿಗಧಿತ ಆಳದಲ್ಲಿ ಅಳವಡಿಸದೆ, ಹೆಚ್ಚು ಅಳತೆ ಪೈಪ್‌ಗಳನ್ನು ಸದರಿ ಕಾಮಗಾರಿಗೆ ಉಪಯೋಗಿಸಿರುವುದಾಗಿ ತೋರಿಸಿ, ಹಾಗೂ ಭೂಮಿ ಅಗೆಯಲು ಬೇಕಾದ ಕೂಲಿಯ ಹಣವನ್ನೂ ಸಹ ಹೆಚ್ಚಾಗಿ ತೋರಿಸಿ, ಹೆಚ್ಚುವರಿ ಹಣವನ್ನು ಎದುರುದಾರರಗಳು ಬಿಡುಗಡೆ ಮಾಡಿರುತ್ತಾರೆ. ಹಾಗೂ ಕಾಮಗಾರಿಯನ್ನು ಸರಿಯಾಗಿ ಪರಿವೀಕ್ಷಿಸಿದೆ ಎಂ.ಬಿ.ಪುಸ್ತಕದಲ್ಲಿ ದಾಖಲಾದ ಅಳತೆಗೆ ಹಣವನ್ನು ಬಿಡುಗಡೆ ಮಾಡಿ ಸರ್ಕಾರಕ್ಕೆ ನಷ್ಟ ಉಂಟು ಮಾಡಿ ಕರ್ತವ್ಯಲೋಪವೆಸಗಿರುವುದು ಸ್ಪಷ್ಟಪಡುತ್ತದೆ."

ಎದುರುದಾರರಗಳು 1-2 ಸರ್ಕಾರಿ ನೌಕರರುಗಳಾಗಿದ್ದು, ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವೆಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಗಳು 1966ರ ನಿಯಮ 3(i)(ii) (iii)ರನ್ನು ಉಲ್ಲಂಘಿಸಿರುವುದರಿಂದ, ಸದರಿ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲು ಪ್ರಕರಣವನ್ನು ತಮಗೆ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 14(ಎ) ರನ್ವಯ ವಹಿಸಿಕೊಡುವಂತೆ ಮಾನ್ಯ ಉಪಲೋಕಾಯುಕ್ತರು ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರನ್ವಯ ಮಾಡಿರುವ ಶಿಫಾರಸ್ಸನ್ನು ಕಳುಹಿಸಿಕೊಡುತ್ತಾ, ಅಂತೆಯೇ ಕ್ರಮವಹಿಸುವಂತೆ ಅಪರ ನಿಬಂಧಕರು, ರವರು ಕೋರಿರುತ್ತಾರೆ. ಹಾಗೆಯೇ ಅಧಿಕಾರೇತರರಾದ ಎದುರುದಾರರಗಳು3-5, ಇವರುಗಳ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯಡಿ ಕ್ರಮಕೈಗೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರ ವರದಿ ಹಾಗೂ ಅದರೊಂದಿಗಿನ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಎದುರುದಾರರಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವುದು ಕಂಡು ಬಂದ ಹಿನ್ನೆಲೆಯಲ್ಲಿ ಎದುರುದಾರರು 1 ಆದ ಶ್ರೀ ಮಹಾಲಿಂಗಪ್ಪ ಹಣಮಂತಪ್ಪ ಸಿದ್ರಾಯಿ, ಸಹಾಯಕ ಅಭಿಯಂತರರು, ಕೆ.ಎನ್.ಎನ್.ಎಲ್. ಉಪವಿಭಾಗ-13, ಕೌಜಲಗಿ, ಗೋಕಾಕ್ ತಾಲ್ಲೂಕು ಬೆಳಗಾವಿ ಜಿಲ್ಲೆ. ಇವರ ಸೇವೆಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಇಲ್ಲದೇ ಇರುವುದರಿಂದ, ಇವರಿಗೆ ಸಂಬಂಧಿಸಿದಂತೆ, ಮಾನ್ಯ ಉಪಲೋಕಾಯುಕ್ತರು-1 ರವರ ಶಿಫಾರಸ್ಸಿನಂತೆ, ಕ್ರಮವಹಿಸುವಂತೆ, ಅಧಿಕಾರಿಯ ಮಾತೃ ಇಲಾಖೆಯಾದ ನೀರಾವರಿ ಇಲಾಖೆಯನ್ನು ದಿನಾಂಕ: 25.10.2016ರ ಅನಧಿಕೃತ ಟಿಪ್ಪಣಿಯಲ್ಲಿ ಕೋರಲಾಗಿತ್ತು, ಅಧಿಕಾರೇತರುಗಳಾದ ಎದುರುದಾರರು 3-5 ರವರುಗಳ ವಿರುದ್ಧ ಮಾನ್ಯ ಉಪಲೋಕಾಯುಕ್ತರವರ, ಶಿಫಾರಸ್ಸಿನಂತೆ, ಕ್ರಮವಹಿಸುವಂತೆ, ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯನ್ವಯ, ನಿಯಮಾನುಸಾರ ಅಗತ್ಯ ಕ್ರಮವನ್ನು ಕೈಗೊಳ್ಳುವಂತೆ ನಿರ್ದೇಶಕರು ಪಂಚಾಯತ್ ರಾಜ್-1 ರವರನ್ನು ಕೋರಲಾಗಿರುತ್ತದೆ.

ಎದುರುದಾರರು-2 ಆದ ಶ್ರೀ ಕೆ.ಎಸ್.ಪಾಟೀಲ್, ಕಾರ್ಯನಿರ್ವಾಹಕ ಅಭಿಯಂತರರು, ತಾಲ್ಲೂಕು ಪಂಚಾಯತ್ ರಾಮದುರ್ಗ ಇವರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದುರಿಂದ, ಸದರಿ ಅಧಿಕಾರಿಯ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ, ಮಾನ್ಯ ಉಪಲೋಕಾಯುಕ್ತರು-1, ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರನ್ವಯ, ಮಾಡಿರುವ ಶಿಫಾರಸ್ಸಿನಂತೆ, ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ರನ್ವಯ, ವಿವರವಾದ ಇಲಾಖಾ ವಿಚಾರಣೆಯನ್ನು ಜರುಗಿಸಲು, ಅದೇ ನಿಯಮಾವಳಿಗಳ ನಿಯಮ 14(ಎ) ರನ್ವಯ, ಮಾನ್ಯ ಉಪಲೋಕಾಯುಕ್ತರವರಿಗೆ ಮೇಲೆ ಓದಲಾದ (3)ರ ಸರ್ಕಾರಿ ಆದೇಶದಲ್ಲಿ ವಹಿಸಲಾಗಿರುತ್ತದೆ.

ನೀರಾವರಿ ಇಲಾಖೆಯು ತನ್ನ ಪತ್ರ ದಿನಾಂಕ: 13.01.2017 ರಲ್ಲಿ ಸದರಿ ಪ್ರಕರಣವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಯೋಜನೆಗಳಡಿಯಲ್ಲಿ ನಡೆದಿರುವುದರಿಂದ, ಮೊದಲನೇ ಎದುರುದಾರರಾದ ಶ್ರೀ ಮಹಲಿಂಗಪ್ಪ ಹಣಮಂತಪ್ಪ ಸಿದ್ರಾಯಿ, ಸಹಾಯಕ ಇಂಜಿನೀಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಉಪವಿಭಾಗ-13, ಕೌಜಲಗಿ, ಇವರ ವಿರುದ್ಧದ ಮಾನ್ಯ ಉಪಲೋಕಾಯುಕ್ತರವರ ವರದಿ ಹಾಗೂ ಶಿಫಾರಸ್ಸಿನಂತೆ ಅಗತ್ಯ ಕ್ರಮಕೈಗೊಳ್ಳಲು ಜಲಸಂಪನ್ಮೂಲ ಇಲಾಖೆಯ ಸಹಮತಿ ಇರುತ್ತದೆಂದು ತಿಳಿಸುತ್ತಾ, ಅದರಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದಲೇ ಸೂಕ್ತ ಕ್ರಮವಹಿಸುವಂತೆ ಕೋರಿರುತ್ತದೆ.

ಮೊದಲನೇ ಎದುರುದಾರರಾದ ಶ್ರೀ ಮಹಲಿಂಗಪ್ಪ ಹಣಮಂತಪ್ಪ ಸಿದ್ರಾಯಿ, ಸಹಾಯಕ ಇಂಜಿನೀಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ ಉಪವಿಭಾಗ-13, ಕೌಜಲಗಿ, ಗೋಕಾಕ್ ತಾಲ್ಲೂಕು, ಇವರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದುದರಿಂದ, ಜಲಸಂಪನ್ಮೂಲ ಇಲಾಖೆಯು ನೀಡಿರುವ ಸಹಮತಿಯ ಮೇರೆಗೆ, ಮಾನ್ಯ ಉಪ ಲೋಕಾಯುಕ್ತ-1 ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆಯ 1984ರ ಕಲಂ 12(3) ರನ್ವಯ, ಮಾಡಿರುವ ಶಿಫಾರಸ್ಸಿನಂತೆ, ಸದರಿ ಅಧಿಕಾರಿಯ ವಿರುದ್ಧದ ಆರೋಪಗಳ ಸಂಬಂಧ ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸಲು ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ರನ್ವಯ ಜರುಗಿಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ 14(ಎ) ರನ್ವಯ ಮಾನ್ಯ ಉಪಲೋಕಾಯುಕ್ತ-1 ರವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ, ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 191 ವಿಸೇಬಿ 2016 ಬೆಂಗಳೂರು ದಿನಾಂಕ: 08-02-2017</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ಶ್ರೀ ಮಹಲಿಂಗಪ್ಪ ಹಣಮಂತಪ್ಪ ಸಿದ್ರಾಯಿ, ಸಹಾಯಕ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಉಪವಿಭಾಗ-13, ಕೌಜಲಗಿ, ಗೋಕಾಕ್ ತಾಲ್ಲೂಕು, ಇವರ ವಿರುದ್ಧದ ಆರೋಪಗಳ ಸಂಬಂಧ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ಮತ್ತು 11(ಎ) ರನ್ವಯ ಸಮಗ್ರವಾದ

ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ-14(ಎ)ರ ಪ್ರಕಾರ ಮಾನ್ಯ ಉಪಲೋಕಾಯುಕ್ತರು-1, ಕರ್ನಾಟಕ ಲೋಕಾಯುಕ್ತ ರವರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

08/02/2017

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು-1 ಕರ್ನಾಟಕ ಲೋಕಾಯುಕ್ತ, ಬೆಂಗಳೂರು
3) ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಿರಾವರಿ ಇಲಾಖೆ, ವಿಕಾಸ ಸೌಧ, ಬೆಂಗಳೂರು
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ಬೆಳಗಾವಿ.
5) ನಿರ್ದೇಶಕರು (ಪಂ.ರಾಜ್-1), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
6) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು-01.
7) ಸರ್ಕಾರದ ಅಧೀನ ಕಾರ್ಯದರ್ಶಿ,(ಸೇವೆಗಳು) ನೀರಾವರಿ ಇಲಾಖೆ, ವಿಕಾಸ ಸೌಧ ಬೆಂಗಳೂರು.

ಪ್ರತಿ ಮಾಹಿತಿಗಾಗಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ ಜಂಟಿ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.